# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 276 |
| ಸದಸ್ಯರ ಹೆಸರು | : | ಶ್ರೀ.ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.02.2023 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ, ಬಾಗಲಕೋಟೆ , ವಿಜಯಪುರ ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯತಿ ಹಂತದಲ್ಲಿರುವ ಒಟ್ಟು ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಳಗಾವಿ ಜಿಲ್ಲೆ-223, ಬಾಗಲಕೋಟೆ ಜಿಲ್ಲೆ-122, ವಿಜಯಪುರ ಜಿಲ್ಲೆ-124 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ <u>ಅನುಬಂಧ</u> ದಲ್ಲಿ ನೀಡಲಾಗಿದೆ. |
| ಆ) | ಗ್ರಾಮ ಪಂಚಾಯತಿ ಹಂತದಲ್ಲಿರುವ ಪಶು ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬಂದಿದೆ.<br><br>ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವ ಸಂಸ್ಥೆಗಳಿಗೆ ಜಾನುವಾರುಗಳ ಚಿಕಿತ್ಸೆಗೆ ತೊಂದರೆ ಆಗದಂತೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಲಾಗಿರುತ್ತದೆ.<br><br>ಪ್ರಸ್ತುತ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ದಿನಾಂಕ:08-03-2022 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಲಾದ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಮಾಡಲಾಗಿದ್ದು, ಕನ್ನಡ ಭಾಷೆ ಅಭ್ಯಾಸ ಮಾಡದ ಅಭ್ಯರ್ಥಿಗಳಿಗೆ ಕೆ.ಇ.ಎ. ಮುಖಾಂತರ ಕನ್ನಡ ಭಾಷೆ ಪರೀಕ್ಷೆ ನಡೆಸಲಾಗಿರುತ್ತದೆ. ಅದರನ್ವಯ ಅರ್ಹತಾ ಪಟ್ಟಿ ತಯಾರಿಸಲಾಗುತ್ತಿದೆ.<br><br>ಈ ನೇಮಕಾತಿ ಕುರಿತು ಶೈಕ್ಷಣಿಕ ವಿದ್ಯಾರ್ಹತೆಯನ್ನು (Merit) ಆಧರಿಸಿ ಆಯ್ಕೆ |

| | | |
|---|---|---|
| | | ಮಾಡುವುದು ಸರಿಯಲ್ಲವೆಂದು ಕೆಲವು ಅಭ್ಯರ್ಥಿಗಳು (50 ಜನ) ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದರ ಮುಖಾಂತರ ಹಾಗೂ ಇನ್ನಿತರೆ ಶೈಕ್ಷಣಿಕ ನ್ಯೂನತೆಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6662/2022 ರಂತೆ ದಾವೆಯನ್ನು ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಈ ಪ್ರಕರಣವನ್ನು ಮಾನ್ಯ KSAT ಬೆಂಗಳೂರಿನ ನ್ಯಾಯಾಲಯಕ್ಕೆ ವರ್ಗಾಯಿಸಿರುತ್ತಾರೆ.<br><br>ಪ್ರಕರಣದ ವಿಚಾರಣೆಯು ಮುಗಿದಿದ್ದು, ಅಂತಿಮ ತೀರ್ಪಿಗೆ ಕಾಯ್ದಿರಿಸಲಾಗಿದೆ. ಮಾನ್ಯ ನ್ಯಾಯಾಲಯದ ಆದೇಶದಂತೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.<br><br>250 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು KEA ಮುಖಾಂತರ ಅಧಿಸೂಚನೆಯನ್ನು ಹೊರಡಿಸಿ ಆಯ್ಕೆ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>'ಡಿ' ದರ್ಜೆ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದ್ದು, ಈಗಾಗಲೇ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಬೆಳಗಾವಿ-135, ಬಾಗಲಕೋಟೆ-88 ವಿಜಯಪುರ-79 'ಡಿ' ದರ್ಜೆ ಹುದ್ದೆಗಳಿಗೆ ಸೇವೆಯನ್ನು ಪಡೆಯಲಾಗಿದೆ. |
| ಇ) | ಪಶು ಆಸ್ಪತ್ರೆಗಳಲ್ಲಿ ಈ ಹಿಂದೆ ಒದಗಿಸಲಾದ ಸಲಕರಣೆಗಳಾದ ಫ್ರಿಡ್ಜ್ ಇತ್ಯಾದಿ ಉಪಕರಣಗಳು ತುಕ್ಕು ಹಿಡಿದು ದುರಸ್ಥಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಉಪಕರಣಗಳನ್ನು ಪೂರೈಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? | ಪಶು ಆಸ್ಪತ್ರೆಗಳಿಗೆ ಈ ಹಿಂದೆ ಒದಗಿಸಲಾದ ಸಲಕರಣೆಗಳಾದ ಕೆಲವೊಂದು ಸಂಸ್ಥೆಗಳಲ್ಲಿನ ಫ್ರಿಡ್ಜ್ ಇತ್ಯಾದಿ ಉಪಕರಣಗಳು ದುರಸ್ತಿ ಮಾಡಲಾಗದ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಇಲಾಖೆಯ ವತಿಯಿಂದ ಫ್ರಿಡ್ಜ್ ಗಳ ಬದಲಾಗಿ ಸುಧಾರಿತ ತಂತ್ರಜ್ಞಾನ ಹೊಂದಿರುವ Ice line refrigerator & walk in cooler ಗಳನ್ನು |

ಪಶುವೈದ್ಯ ಸಂಸ್ಥೆಗಳಿಗೆ ಹಂತ ಹಂತವಾಗಿ ಪೂರೈಸಲು ಕ್ರಮಕೈಗೊಳ್ಳಲಾಗಿರುತ್ತದೆ.

ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಿಗೆ ಪೂರೈಸಲಾದ Ice line refridgerator & walk in cooler ಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ಜಿಲ್ಲೆಗಳ ಹೆಸರು | **walk in cooler** | **Ice line refrigerator** |
|---|---|---|---|
| 1 | ಬೆಳಗಾವಿ | 15 | 40 |
| 2 | ಬಾಗಲಕೋಟೆ | 03 | 22 |
| 3 | ವಿಜಯಪುರ | 14 | 22 |

**ಸಂ: ಪಸಂಮೀ ಇ-13 ಪಸಸೇ 2023**

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

## ಬೆಳಗಾವಿ ,ಬಾಗಲಕೋಟೆ, ವಿಜಯಪುರ,ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಹಂತದ ತಾಲ್ಲೂಕುವಾರು ಪಶುವೈದ್ಯಕೀಯ ಸಂಸ್ಥೆಗಳ ಪಟ್ಟಿ-

### ಬೆಳಗಾವಿ ಜಿಲ್ಲೆ

| ಸಂ | ತಾಲೂಕು | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ವಿವರ (ತಾಲೂಕುವಾರು) | | | |
|---|---|---|---|---|---|
| | | ಪಶುಆಸ್ಪತ್ರೆ | ಪಶು ಚಿಕಿತ್ಸಾಲಯ | ಪ್ರಾ.ಪ.ಚಿ.ಕೇಂದ್ರ | ಒಟ್ಟು |
| 1 | ಅಥಣಿ | 2 | 15 | 5 | 22 |
| 2 | ಕಾಗವಾಡ | 0 | 2 | 3 | 5 |
| 3 | ಬೈಲಹೊಂಗಲ | 1 | 12 | 6 | 19 |
| 4 | ಕಿತ್ತೂರು | 0 | 3 | 9 | 12 |
| 5 | ಬೆಳಗಾವಿ | 3 | 11 | 3 | 17 |
| 6 | ಚಿಕ್ಕೋಡಿ | 2 | 10 | 3 | 15 |
| 7 | ನಿಪ್ಪಾಣಿ | 0 | 10 | 3 | 13 |
| 8 | ಗೋಕಾಕ | 1 | 10 | 5 | 16 |
| 9 | ಮೂಡಲಗಿ | 0 | 7 | 1 | 8 |
| 10 | ಹುಕ್ಕೇರಿ | 1 | 18 | 7 | 26 |
| 11 | ಖಾನಾಪೂರ | 2 | 7 | 4 | 13 |
| 12 | ರಾಯಭಾಗ | 0 | 9 | 1 | 10 |
| 13 | ರಾಮದುರ್ಗ | 3 | 12 | 2 | 17 |
| 14 | ಸವದತ್ತಿ | 1 | 16 | 13 | 30 |
| | | **16** | **142** | **65** | **223** |

### ಬಾಗಲಕೋಟೆ ಜಿಲ್ಲೆ

| ಕ್ರ.ಸಂ | ತಾಲ್ಲೂಕ | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ವಿವರ (ತಾಲೂಕುವಾರು) | | | |
|---|---|---|---|---|---|
| | | ಪಶುಆಸ್ಪತ್ರೆ | ಪಶು ಚಿಕಿತ್ಸಾಲಯ | ಪ್ರಾ.ಪ.ಚಿ.ಕೇಂದ್ರ | ಒಟ್ಟು |
| 01 | ಬಾಗಲಕೋಟೆ | 0 | 14 | 5 | 19 |
| 02 | ಬಾದಾಮಿ | 01 | 16 | 01 | 18 |
| 03 | ಗುಳೇದಗುಡ್ಡ | 0 | 2 | 1 | 3 |
| 04 | ಹುನಗುಂದ | 0 | 06 | 06 | 12 |
| 05 | ಇಲಕಲ್ | 01 | 05 | 07 | 13 |
| 06 | ಬೀಳಗಿ | 0 | 13 | 0 | 13 |
| 07 | ಮುಧೋಳ | 0 | 10 | 6 | 16 |
| 08 | ಜಮಖಂಡಿ | 01 | 07 | 10 | 18 |
| 09 | ರಬಕವಿ-ಬನಹಟ್ಟಿ | 0 | 09 | 01 | 10 |
| ಒಟ್ಟು | | 03 | 82 | 37 | 122 |

## ವಿಜಯಪುರ ಜಿಲ್ಲೆ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ವಿವರ (ತಾಲೂಕುವಾರು)

| ಕ್ರ.ಸಂ | ತಾಲ್ಲೂಕು | ಪಶು ಆಸ್ಪತ್ರೆ | ಪಶು ಚಿಕಿತ್ಸಾಲಯ | ಪ್ರಾ.ಪ.ಚಿ.ಕೇಂದ್ರ | ಒಟ್ಟು |
|---|---|---|---|---|---|
| 1 | ವಿಜಯಪುರ | 0 | 03 | 09 | 12 |
| 2 | ಬಬಲೇಶ್ವರ | 0 | 06 | 03 | 9 |
| 3 | ತಿಕೋಟಾ | 0 | 05 | 05 | 10 |
| 4 | ಇಂಡಿ | 01 | 14 | 04 | 19 |
| 5 | ಚಡಚಣ | 0 | 04 | 06 | 10 |
| 6 | ಸಿಂದಗಿ | 0 | 03 | 04 | 07 |
| 7 | ಆಲಮೇಲ | 01 | 02 | 05 | 08 |
| 8 | ದೇವರ ಹಿಪ್ಪರಗಿ | 0 | 03 | 05 | 08 |
| 9 | ಬ.ಬಾಗೇವಾಡಿ | 01 | 06 | 03 | 10 |
| 10 | ಕೋಲ್ಹಾರ | 0 | 04 | 0 | 04 |
| 11 | ನಿಡಗುಂದಿ | 0 | 04 | 0 | 04 |
| 12 | ಮುದ್ದೇಬಿಹಾಳ | 02 | 07 | 04 | 13 |
| 13 | ತಾಳಿಕೋಟಿ | 0 | 07 | 03 | 10 |
| | ಒಟ್ಟು | 5 | 68 | 51 | 124 |